# ನಾಮನಿರ್ದೇಶನ ಮಾರ್ಗದರ್ಶನ ಸೂತ್ರಗಳು

## ದಿ ಟೀಚರ್-ಲೈಬ್ರರಿಯನ್ಸ್ ಚಾಯ್ಸ್ ಅವಾರ್ಡ್ಸ್ - ಕನ್ನಡ

### ರೂಮ್ ಟು ರೀಡ್ ಚಿಲ್ಡ್ರನ್'ಸ್ ಲಿಟರೇಚರ್ ಅವಾರ್ಡ್ಸ್ ಮತ್ತೊಮ್ಮೆ 2026 ರಲ್ಲಿ!

ಭಾರತೀಯ ಭಾಷೆಗಳಲ್ಲಿ ಉತ್ತಮ ಮಕ್ಕಳ ಸಾಹಿತ್ಯವನ್ನು ನಿರ್ಮಿಸುವ ರಚನಾಕಾರರು ಮತ್ತು ಪ್ರಕಾಶಕರನ್ನು ಸಂಭ್ರಮಿಸುವ ಈ ಪ್ರಶಸ್ತಿಗಳು ಈಗ ಸತತವಾಗಿ ನಾಲ್ಕನೇ ವರ್ಷದಲ್ಲಿ ನೀಡಲಾಗುತ್ತಿವೆ. ಮಕ್ಕಳ ಸಾಹಿತ್ಯವನ್ನು ಕುರಿತ ಸಂವಾದಕ್ಕೆ ಹೆಚ್ಚಿನ ಮಹತ್ವ ಮತ್ತು ವಿಶ್ವಾಸಾರ್ಹತೆ ತರುವ ದಿಕ್ಕಿನಲ್ಲಿ ಇದೊಂದು ಪುಟ್ಟ ಹೆಜ್ಜೆ ಎಂದು ಆಶಿಸುತ್ತೇವೆ.

ಮಕ್ಕಳ ಓದಿನ ಒಲವನ್ನು ಹೆಚ್ಚಿಸಲು ಯಾವ ಪುಸ್ತಕಗಳು ಅತಿ ಸೂಕ್ತವೆಂದು ತಿಳಿದುಕೊಳ್ಳುವುದು 'ದಿ ಟೀಚರ್-ಲೈಬ್ರರಿಯನ್ಸ್ ಚಾಯ್ಸ್ ಅವಾರ್ಡ್ಸ್' ಪ್ರಶಸ್ತಿಗಳ ಗುರಿಯಾಗಿರುತ್ತದೆ! ಮಕ್ಕಳ ಸಾಹಿತ್ಯದ ಪಾತ್ರವನ್ನು ಪ್ರೋತ್ಸಾಹಿಸಲು ಹಾಗು ಪುಸ್ತಕ ಬಳಕೆಯ ಮುಖ್ಯ ಪ್ರತಿನಿಧಿಗಳಾದ ಶಿಕ್ಷಕ-ಗ್ರಂಥಪಾಲಕರನ್ನು ಶಕ್ತರಾಗಿಸಲು ಈ ಪ್ರಶಸ್ತಿಗಳು ವರ್ಷಕೊಮ್ಮೆ ತರಗತಿ/ಗ್ರಂಥಾಲಯಗಳಲ್ಲಿ ಅತ್ಯಂತ ಜನಪ್ರಿಯ ಮಕ್ಕಳ ಪುಸ್ತಕಗಳಿಗೆ ನೀಡಲಾಗುತ್ತವೆ.

2026 ರಲ್ಲಿ, ದಿ ಟೀಚರ್-ಲೈಬ್ರರಿಯನ್ಸ್ ಚಾಯ್ಸ್ ಅವಾರ್ಡ್ಸ್ ಗಳನ್ನು ಕನ್ನಡದ ಪುಸ್ತಕಗಳು ಮತ್ತು ಪ್ರಕಾಶಕರಿಗೆ ನೀಡಲಾಗುವುದು ಎಂದು ಘೋಷಿಸಲು ನಾವು ಸಂತೋಷಪಡುತ್ತೇವೆ!

ತಮ್ಮ ಅತಿ ಹೆಚ್ಚು ಮಾರಾಟವಾಗಿರುವ ಎರಡು ವಯೋಮಾನ **(3-8 ವರ್ಷ ಮತ್ತು 8-12 ವರ್ಷ)** ದ ಕನ್ನಡ ಮಕ್ಕಳ ಪುಸ್ತಕಗಳ ನಾಮನಿರ್ದೇಶನಗಳನ್ನು ರೂಮ್ ಟು ರೀಡ್ ಆಹ್ವಾನಿಸುತ್ತದೆ. ಇದರ ಮಾರ್ಗಸೂಚಿಗಳು ಮತ್ತು ಮಾನದಂಡಗಳು ಇಲ್ಲಿವೆ!

- ನಾಮನಿರ್ದೇಶಿತ ಪುಸ್ತಕಗಳು **3-8 ವರ್ಷ ಅಥವಾ 8-12 ವರ್ಷ** ವಯಸ್ಸಿನ ಮಕ್ಕಳಿಗೆ ಸೂಕ್ತವಾಗಿರಬೇಕು.
- ನಾಮನಿರ್ದೇಶಿತ ಪುಸ್ತಕಗಳು ಮೂಲತಃ ಕನ್ನಡದಲ್ಲಿ ರಚಿಸಿರಬೇಕು ಕನ್ನಡ ಅಥವಾ ಇತರ ಭಾರತೀಯ ಭಾಷೆಯಿಂದ /ಇಂಗ್ಲಿಷ್ ನಿಂದ ರೂಪಾಂತರಗೊಂಡಿರಬೇಕು/ಅನುವಾದಿಸಿರಬೇಕು.
- ನಾಮನಿರ್ದೇಶಿತ ಪುಸ್ತಕಗಳು ಸಚಿತ್ರ ಕಥೆಪುಸ್ತಕ ಅಥವಾ ಚಿತ್ರಪುಸ್ತಕಗಳಾಗಿರಬೇಕು. **(> 60% ಸಚಿತ್ರ ಪುಟಗಳಿರಬೇಕು)**
- ಅರ್ಹ ಪುಸ್ತಕಗಳು 2017-2022 ರ ಅವಧಿಯಲ್ಲಿ ಪ್ರಕಟಿತವಾಗಿರಬೇಕು ಅಥವಾ ಮರುಮುದ್ರಣಗೊಂಡಿರಬೇಕು.
- ನಾಮನಿರ್ದೇಶಿತ ಪುಸ್ತಕದ "ಲೊ-ರೆಸೊಲ್ಯೂಷನ್" ಪಿಡಿಎಫ್ ಅನ್ನು ನೀವು ಅಪ್ಲೋಡ್ ಮಾಡಬೇಕು. ಈ PDF ಅನ್ನು ರೂಮ್ ಟು ರೀಡ್ ವೆಬ್ಸೈಟ್ ನಲ್ಲಿ ವೋಟಿಂಗ್ ಗಾಗಿ ಲಭ್ಯವಿರಿಸಲಾಗುತ್ತದೆ.
- ಪುಸ್ತಕದ ಜನಪ್ರಿಯತೆಯನ್ನು ಅರಿತುಕೊಳ್ಳಲು ನಾವು ಪ್ರಕಾಶಕರನ್ನು 31 ಡಿಸೆಂಬರ್ 2025 ವರೆಗೂ ಆದ ಆ ಪುಸ್ತಕದ ಮಾರಾಟದ ಮಾಹಿತಿಯನ್ನು ನಮಗೆ ತಿಳಿಸಲು ಕೇಳಿಕೊಳ್ಳುತ್ತೇವೆ.

*12 ವರ್ಷಗಳಿಗೆ ಮೇಲ್ಪಟ್ಟ ಮಕ್ಕಳಿಗೆ ಅಥವಾ ವಯಸ್ಕರಿಗೆ ರಚಿಸಿದ ಪುಸ್ತಕಗಳು ಈ ಪ್ರಶಸ್ತಿಗೆ ಅರ್ಹವಲ್ಲ.
*2017 ರ ನಂತರ ಮರುಮುದ್ರಣವಾಗಿರದ ಪುಸ್ತಕಗಳು ಅರ್ಹವಲ್ಲ.
*ವಿದೇಶೀ ಭಾಷೆಗಳಿಂದ ಕನ್ನಡಕ್ಕೆ ಅನುವಾದಿತ ಪುಸ್ತಕಗಳು ಅರ್ಹವಲ್ಲ.

**ಪುಸ್ತಕಗಳ ನಾಮನಿರ್ದೇಶನ ಮಾಡಲು ಇಲ್ಲಿ ಕ್ಲಿಕ್ ಮಾಡಿ: https://forms.gle/fbHV5P4y8S4ToFHc9**

ನಾವು ನಾಮನಿರ್ದೇಶಿತ ಪುಸ್ತಕಗಳ ಕಿರುಪಟ್ಟಿಯನ್ನು ತಯಾರಿಸಿದ ನಂತರ, ಕರ್ನಾಟಕದಾದ್ಯಂತ ಶಿಕ್ಷಕರು ಮತ್ತು ಗ್ರಂಥಪಾಲಕರು ತಮ್ಮ ನೆಚ್ಚಿನ ಪುಸ್ತಗಳನ್ನು ನಮ್ಮ ವೆಬ್ಸೈಟ್ ನಲ್ಲಿ ಆಯ್ಕೆ ಮಾಡಬಹುದು. ಪ್ರಕಾಶಕರು ಪ್ರತಿ ವಯೋಮಿತಿಗೆ 5 ಪುಸ್ತಕಗಳ ನಾಮನಿರ್ದೇಶನ ಮಾಡಬಹುದು.

**ನಾಮನಿರ್ದೇಶನ ಮಾಡಲು ಕೊನೆಯ ದಿನಾಂಕ 30 ಏಪ್ರಿಲ್ 2026.**

ಹೆಚ್ಚಿನ ಮಾಹಿತಿಗಾಗಿ, RTR.IndiaAwards@roomtoread.org ಗೆ ಬರೆಯಿರಿ.